(*b*) Two Girls' High Schools. They are :—

1. Modern Education Society Girls High School,
2. Viswabharath Seva Samithi Girls High School,

These were started during 1972-73 :—

(*c*) —

	Strength	
	Boys	*Girls*
1. Shivaji Vidyalaya High School for Boys. ...	189	...
2. Modern Education Society Girls High School. ...	...	25
3. Viswabharath Seva Samithi Girls' High School. ...	...	40

ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣ

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್, (ಶಿರ್ಸಿ).—

೮. (೧೩).—ವಿದ್ಯಾಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ರಾಜ್ಯದ ಕಾಲೇಜುಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಲೈಂಗಿಕ ಶಿಕ್ಷಣ ಕೊಡಬೇಕೆಂಬ ಸಲಹೆ ಸರಕಾರದ ಪರಿಶೀಲನೆಯಲ್ಲಿದೆಯೇ ;

(ಆ) ಈ ಬಗ್ಗೆ ಸರ್ಕಾರ ಕೈಕೊಂಡ ತೀರ್ಮಾನಗಳೇನು ?

ಶ್ರೀ ಎ. ಆರ್. ಬದರಿನಾರಾಯಣ.—(ವಿದ್ಯಾ ಮಂತ್ರಿಗಳು)

ಉತ್ತರ.—(ಅ). ಇಲ್ಲ.

(ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಜಿ-ಮಹಾರಾಜರುಗಳ ಅರಮನೆಗಳು

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೯. (೧೪).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಮೈಸೂರಿನ ಮಾಜಿ-ಮಹಾರಾಜರಿಗೆ ಸೇರಿದ ಮೈಸೂರು, ಬೆಂಗಳೂರು ಮತ್ತು ಉದಕಮಂಡಲದ ಮೂರು ಅರಮನೆಗಳನ್ನು ಮಾರಾಟಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ ;

(ಆ) ಈ ಅರಮನೆಗಳು ರಾಜ್ಯ ಸರಕಾರದ ಸ್ವತ್ತು ಮತ್ತು ಅವು ರಾಜ್ಯ ಸರ್ಕಾರದ ಮೇಲುಸ್ತುವಾರಿಯಲ್ಲಿವೆ. ಅವರು ಅವುಗಳನ್ನು ಮಾರಾಟ ಮಾಡಲು ರಾಜ್ಯ ಸರಕಾರದ ಒಪ್ಪಿಗೆಯಿಲ್ಲದೆ ಅವಕಾಶವಿಲ್ಲವೆಂದು ರಾಜ್ಯ ಸರಕಾರಕ್ಕೆ ಮನವಿಗಳು ಬಂದಿವೆಯೇ ;

(೫) ಕೇಂದ್ರ ಸರಕಾರವು ಮಾರಾಟಕ್ಕೆ ಅನುಮತಿ ನೀಡುವಾಗ ರಾಜ್ಯ ಸರ್ಕಾರದೊಡನೆ ಪೂರ್ವ ಪರ್ಯಾಲೋಚನೆ ನಡೆಸಿರುವರೇ ?

Sri D. DEVARAJ URS (Chief Minister).—

ಉತ್ತರ.—(ಅ) (ಆ) (೫).—The question of removal of inalienability clauses from the Covenants / Merger Agreement is still under the consideration of the Government of India

ಸಿದ್ದಾಪುರ A.P.M.C. ಸೊಸೈಟಿಯ ಅಕ್ರಮ ವ್ಯವಹಾರ

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೧೦. (೧೭)—ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಸುಮಾರು ೩ ಲಕ್ಷ ರೂ. ಹಣವನ್ನು ವ್ಯಾಪಾರಸ್ಥರಿಗೆ ಸಾಲವಾಗಿ ಕೊಟ್ಟಿರುವುದರ ಬಗ್ಗೆ ಗುಡ್ಡೇಕೊಪ್ಪದ ನಿವಾಸಿಗಳೊಬ್ಬರು ಸರ್ಕಾರದ ಗಮನಕ್ಕೆ ತಂದಿರುವುದು ನಿಜವೆ ;

(ಆ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ;

(೫) ಕೊಟ್ಟಿರುವ ಸಾಲ ವಸೂಲಿ ಮಾಡಲು ಸಂಘದವರು ತೆಗೆದುಕೊಂಡ ಕ್ರಮ ಗಳಾವುವು? ಏನೂ ಆಸ್ತಿಪಾಸ್ತಿ ಇಲ್ಲದವರಿಗೆ ಸಾಲಕೊಟ್ಟಿರುವುದರಿಂದ ಅದನ್ನು ವಸೂಲಿ ಮಾಡುವ ಮಾರ್ಗಗಳಾವುವು ;

(ಈ) ಈ ಸಂಘದಲ್ಲಿ 3 ಲಕ್ಷ 30 ಸಾವಿರ ಸರ್ಕಾರಿ ಷೇರು ಮೊಬಲಗು ಸುಮಾರು 1 ಲಕ್ಷ 20 ಸಾವಿರ, ಖಾಸಗಿ ಷೇರು ಮೊಬಲಗು ಇರುವುದರಿಂದ ಅದರ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಸೂಕ್ತ ಕ್ರಮಗಳಾವುವು?

ಶ್ರೀ ಎ. ಶಂಕರ ಆಳ್ವ. (ಸಹಕಾರ ಸಚಿವರು)

ಉತ್ತರ.—(ಅ) ವ್ಯಾಪಾರಸ್ಥರಿಗೆ ಕ್ರೆಡಿಟ್ಟಿನ ಹೊರಗೆ ಮಹಸೂಲನ್ನು ಕೊಟ್ಟು ಅವರ ಮೇಲೆಯೇ ಲಕ್ಷಗಟ್ಟಲೆ ಬಾಕೀ ಮಾಡಿಕೊಂಡಿದ್ದಾರೆಂದು ಸಂಘದ ಮೇಲೆ ಗುಡ್ಡೇಕೊಪ್ಪದ ಸೀತಾರಾಮ ನಾರಾಯಣಭಟ್ಟ ಎನ್ನುವವರು ರಿಜಿಸ್ಟ್ರಾರ್‌ರವರಿಗೆ ದೂರು ಕೊಟ್ಟಿದ್ದಾರೆ.

(ಆ) ಈ ಬಗ್ಗೆ ತನಿಖೆ ನಡೆಸಿ ವರದಿ ತರಿಸಿಕೊಳ್ಳಲಾಗಿದೆ ; ವರದಿ ಪರಿಶೀಲನೆಯಲ್ಲಿದೆ. ಸಂಘದವರು ಬಾಕೀ ವಸೂಲಿಗೆ ಕಾನೂನಿನನ್ವಯ, ಕ್ರಮ ತೆಗೆದುಕೊಂಡಿದ್ದಾರೆ.

(೫) ಸಂಘವು ವ್ಯಾಪಾರಸ್ಥರಿಗೆ ಯಾವ ರೀತಿಯ ಸಾಲವನ್ನು ಕೊಟ್ಟಿಲ್ಲ ; ಆದರೆ ಸಂಘವು ವ್ಯಾಪಾರಿ ರೂಢಿಯ ಪ್ರಕಾರ ಕೆಲ ವ್ಯಾಪಾರಸ್ಥರೊಂದಿಗೆ ಟ್ರೇಡ್ ಲಿಮಿಟ್ ವ್ಯವಸ್ಥೆ ಹೊಂದಿದೆ : ಇದರಲ್ಲಿ ಸಂಘಕ್ಕೆ ಕೆಲ ಬಾಕೀ ಬರಬೇಕಾಗಿದ್ದು ಕಾನೂನು ಪ್ರಕಾರ ಬಾಕೀದಾರರ ಆಸ್ತಿ ಪಾಸ್ತಿಗಳನ್ನು ದಾವಾ ತೀರ್ಮಾನಕ್ಕೆ ಪೂರ್ವಾನ್ವಯವಾಗಿ ಅಟ್ಯಾಚ್ ಮಾಡಲಾಗಿದೆ: ಮತ್ತೆ ಕೆಲ ಸಾಲಗಳು ಭದ್ರಪಡಿಸಲ್ಪಟ್ಟವುಗಳಾಗಿವೆ : ಒಬ್ಬ ಖರೀದಿದಾರರ (ಆಸಾಮಿಯಿಂದ) ರೂ. 1,385–16) ಬಾಕಿಯಿದ್ದು ಇದಕ್ಕೆ ಯಾವ ಭದ್ರತೆಯೂ ಇರುವುದಿಲ್ಲ. ಈ ಬಾಕಿ ವಸೂಲಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.